**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳಲ್ಲಿರುವ ಒಂದು ರಸೀದಿಯನ್ನು ನಿಪಿ-1 ಎಂದು, ಸರ್ವೆ ನಂ. 51/ಬಿ ರ 4 ಪುಟದಲ್ಲಿರುವ ಕೈಬರಹ ಪಹಣಿ ಪತ್ರಿಕೆಯ ದೃಢಿಕೃತ ನಕಲುಗಳನ್ನು ನಿಪಿ-2 ಎಂದು, ಸರ್ವೆ ನಂ. 60/*/3 ರ 1 ಪುಟದಲ್ಲಿರುವ ಪತ್ರಿಕೆಯನ್ನು ನಿಪಿ-3 ಎಂದು, ಸರ್ವೆ ನಂ. 51/*/1 ರ 9 ಪುಟದಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-4 ಎಂದು, ಸರ್ವೆ ನಂ. 60/ಬಿ ರ 6 ಪುಟಗಳಲ್ಲಿರುವ ಕೈಬಹರ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನಿಪಿ-5 ಎಂದು, ಸರ್ವೆ ನಂ. 60/*/1 ರ 4 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-6 ಎಂದು, ಸರ್ವೆ ನಂ. 120/ಸಿ ರ 6 ಪುಟಗಳಲ್ಲಿರುವ ಕೈಬಹರ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನಿಪಿ-7 ಎಂದು, ಸರ್ವೆ ನಂ. 120/*/ಸಿ ರ 7 ಪುಟಗಳಲ್ಲಿರುವ ಪಹಣ ಪತ್ರಿಕೆನು ನಿಪಿ-8 ಎಂದು, ಸರ್ವೆ ನಂ. 121/*/ಸಿ ರ 8 ಪುಟಗಳಲ್ಲಿರುವ ಪಹಣಿ ಪತ್ರಿಕೆಯನು ನಿಪಿ-9 ಎಂದು, ಸರ್ವೆ ನಂ. 120/*/ಸಿ ರ 12 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-10 ಎಂದು, ಸರ್ವೆ ನಂ. 120/*/1 ರ 7 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-11 ಎಂದು, ಸರ್ವೆ ನಂ. 120/*/5 ರ 4 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-12 ಎಂದು, ಸರ್ವೆ ನಂ. 121/*/ಸಿ ರ 6 ಪುಟಗಳಲ್ಲಿರುವ ಕೈಬಹರ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ನಿಪಿ-13 ಎಂದು, ಸರ್ವೆ ನಂ. 121/*/ಸಿ ರ 11 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-14 ಎಂದು, ಸರ್ವೆ ನಂ. 121/*/* ರ 6 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-15 ಎಂದು, ಸರ್ವೆ ನಂ. 120/*/3 ರ 4 ಪುಟಗಳಲ್ಲಿರುವ ಪಹಣಿ ಪತ್ರಿಕೆಯನ್ನು ನಿಪಿ-16 ಎಂದು, 3 ಮ್ಯೂಟೇಷನ ರೇಜಿಸ್ಟರ ಪ್ರತಿಗಳನ್ನು ನಿಪಿ-17 ರಿಂದ 19 ಎಂದು ಗುರುತಿಸಲಾಯಿತು.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ..

**ಪಾಟೀ ಸವಾಲು ಪ್ರತಿವಾದಿ ಪರವಾಗಿ ವಕೀಲರು ಗೈರು ಹಾಜರಿದ್ದು ಮತ್ತು ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**